Reg No M 1229 42nd Year Sri "Satyavadi" Mysore 13—1—1958

ಸತ್ಯವಾದಿ

ಬಿಡಿ ಪ್ರತಿ 3 ಪೈ | ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಾಯರು

ಭಾರತದೊಡನೆ ಕಾಶ್ಮೀರ ಸೇರ್ಪಡೆ ರದ್ದು ಮಾಡಲಡದಂಥಹದು

ದೆಹಲಿಯಲ್ಲಿ ಕಾಶ್ಮೀರ ಮುಖ್ಯ ಮಂತ್ರಿ ಭಕ್ಷಿ ಗುಲಾಂ ಮಹಮದ್‌ರವರ ಸ್ಪಷ್ಟೋಕ್ತಿ

ನವ ದೆಹಲಿ 12 — ರಕ್ಷಣಾಮಂತ್ರಿ ಶ್ರೀ ವಿ ಕೆ ಕೃಷ್ಣಮೆನನ್ ವಹಿಸಿದ್ದ ಕಾಶ್ಮೀರ ಮುಖ್ಯ ಮಂತ್ರಿ ಭಕ್ಷಿ ಗುಲಾಂ ಮಹಮದ್‌ರವರು ಇಲ್ಲಿ ಭಾಷಣಮಾಡುತ್ತಾ, ಭಾರತ ಗಣರಾಜ್ಯದೊಡನೆ ಕಾಶ್ಮೀರ ವಿಲೀನ ಕೊಸೆಯುದು ಹಾಗೂ ರದ್ದುಮಾಡುವಂಥಹದಲ್ಲದ್ದು ಎಂದು ತಿಳಿಸಿದರು ಭಾರತದ ಈ ನಿಲುವಿನ ಮೇಲೆ ಯಾವ ಒಪ್ಪಂದವೂ ಸಾಧ್ಯವಿಲ್ಲ ಎಂದರು ಭಕ್ಷಿ ಗುಲಾಂ ಮಹಮದ್ ರವರು ಭಾಷಣಮಾಡುತ್ತಾ, ಕಾಶ್ಮೀರ ಭಾರತದೊಡನೆ ಸೇರ್ಪಡೆ ಆಗಿರುವದನ್ನು ರದ್ದುಮಾಡುವಂತಿಲ್ಲ ಯಾವ್ದೊ ಒಬ್ಬ ವ್ಯಕ್ತಿ ಯಾರೇ ಆಗಲಿ ಅತನ ಅಭಿಪ್ರಾಯ ದಂತೆ ಈ ಬಗ್ಗೆ ಸಂಧಾನವಿಲ್ಲ ಎಂದರು

ಷೇಕ್ ಅಬ್ದುಲ್ಲರಿಗೆ ಕೋಪ

ಶ್ರೀನಗರ 12 — ಷೇಕ್ ಅಬ್ದುಲ್ಲ ನ್ಯಾಯವಂತ ಕಂಡ ಮಿನ್ಸೂಚನೆ ಇಲ್ಲದೆ ಮೀನಾಗ ಪ್ರವಾಸಿ ಭವನಕ್ಕೆ ಒಂದು ರಾತ್ರಿ ವಿಶ್ರಮಿಸಿಕೊಳ್ಳುವದಾಗಿ ತಿಳಿಸಿದ್ದರು ಆದರೆ ಅದು ಕೆಲವು ಅಧಿಕಾರಿಗಳಿಗೆ ಕಾದಿಡಲಾಗಿತ್ತು ಷೇಕ್ ಅಬ್ದುಲ್ಲ ಚೌಕೀದಾರನ ಮೇಲೆ ರೇಗಿದರು ಅಧಿಕಾರಿಗಳು ಜವರಿಗೆ ಸ್ಥಳವಿತ್ತು ತಾವು ಬೇರೆ ಕಡೆಗೆ ಹೋದರು

ಬ್ಲೇಡುಗಳ ವಶ

ಕುಂಭಕೋಣದ ಪೂರ್ವ ಕಡಲತೀರ ಪಟ್ಟಿಯಲ್ಲಿ ಸುಮಾರು ರೂ 26 ಸಾವಿರ ಮೌಲ್ಯದ ಸರ್ವೆ ಟೂ ಕ್ಲಾಕ್ ಬ್ಲೇಡುಗಳನ್ನು ಪೋಲೀಸರು ವಶಮಾಡಿಕೊಂಡು ತಂಗವೇಲು ಮೊದಲಿಯಾರ್ ಎಂಬವರನ್ನು ವಶಕ್ಕೆ ತೆಗೆದುಕೊಂಡಿರುವರು

× ಪ್ರತಿ ವರ್ಷ 30 ಸಹಸ್ರ ಪದವೀಧರರು ನಿರುದ್ಯೋಗ ವರ್ಗಕ್ಕೆ ಸೇರುತ್ತಿರುವರೆಂದು ನವದೆಹಲಿ ವಾರ್ತೆ

ರಾಜೀನಾಮೆ ಕೊಡುವುದಿಲ್ಲ

ಕಾಶಿ 12 — ಪಂ|| ನೆಹರು ಸ್ವಧಾನಿ ಪದವಿಗೆ ರಾಜೀನಾಮೆ ಕೊಡುವದಿಲ್ಲವೆಂದು ಪಿಎಸ್ಪಿ ನಾಯಕ ಶ್ರೀ ದಾಮೋದರ ಸ್ವರೂಪ ಸೇಟರಿಗೆ ಒರೆದ ಪತ್ರದಲ್ಲಿ ತಿಳಿಸಿರುವರು

ಹಡಗು ವಶ

ಡಾಕ್ಕ 12 — ಭಾರತದ ಅಶೋಕ ಎಂಬ ಜಹಜನ್ನು ಪೂರ್ವ ಪಾಕಿಸ್ತಾನ ವಶಪಡಿಸಿಕೊಂಡಿದೆ ಕಲ್ಕತ್ತಾದಿಂದ ಅಸ್ಸಾಮಿಗೆ ರೂ 3ಕಾಲು ಲಕ್ಷ ಮೌಲ್ಯದ ಬಟ್ಟೆ ಮುಂತಾದವು ಹೋಗುತ್ತಿದ್ದವು

ಬ್ರಿಟ್ಟಿಗೆ ಸೇರಿದ್ದು

ನವ ದೆಹಲಿ 11 — ಭಾರತ ಕಚೇರಿ ಪುಸ್ತಕ ಭಂಡಾರ ಬ್ರಿಟ್ಟಿಗೆ ಸೇರಿದ್ದೆಂದು ಪ್ರಧಾನಿ ವೆ.ಕ್ಲೆಲ್ಲ ತಿಳಿಸಿದ್ದಾರೆ

ಲಾರಿ ಮುಂದೆ ಮಗುನನ್ನೆಸೆದು ಕೊಂದ ತಂದೆ

ಬೊಂಬಾಯಿನಲ್ಲಿ ಮೊನ್ನೆ ಬೆವರ್ 21 ವರ್ಷದ ನಿರುದ್ಯೋಗಿ ಫಕೀರ್ ಅಹ್ಮದ್ ತನ್ನ 6ತಿಂಗಳ ಮಗುವನ್ನು ಓಡುತ್ತಿದ್ದ ಲಾರಿಯ ಮುಂದೆ ಎಸೆದು ಕೊಂದನು. ಬಳಿಕ್ಕೆ ಅವನಿಗೂ ಅವನ ಹೆಂಡತಿಗೂ ತಮ್ಮ ಕಷ್ಟದ ವಿಷಯದಲ್ಲಿ ತುಂಬಾ ಬಿಸಿ ಮಾತು ನಡೆದು ಅವಳು ತನ್ನ ಮಗು ಸತ್ತಿದ್ದರಾಗಿತ್ತೆಂದಳು.

× ಮಾಸ್ಕೊ ಭೂಗೋಳಶಾಸ್ತ್ರ ಸಾಹಿತ್ಯ ಪ್ರಕಟಣಾಲಯವು ಭಂಕಮಂಡಲದ ಬಗ್ಗೆ ಭೂಗೋಳಶಾಸ್ತ್ರ ಗ್ರಂಥವೊಂದನ್ನು ಪ್ರಕಟಿಸಲಿದೆ

ರೈಲ್ವೆ ಅವಘಡದ ಬಗ್ಗೆ ವಿಚಾರಣೆ

1890ರ ಭಾರತೀಯ ರೈಲ್ವೆಗಳ ಕಾನೂನಿನ 82—ಬಿ ವಿಭಾಗದ ಪ್ರಕಾರ ಭಾರತ ಸರ್ಕಾರದವರು, 1958 ರ ಜನವರಿ 1 ರಂದು ಅಂಬಾಲಾ ದಂಡಿನ ಬಳಿ ಇರುವ ಮೊಹ್ರಿ ರೈಲ್ವೆ ನಿಲ್ದಾಣದಲ್ಲಿ ಸಂ 2 ಡಿಯು ಪ್ಯಾಸೆಂಜರು ರೈಲು ಮತ್ತು 45 ಯು ಪಿ ದೆಹಲಿ ವಶಾಣಕೋಟೆ ಜನತಾ ಎಕ್ಸ್‌ಪ್ರೆಸ್ ರೈಲು ಇವುಗಳ ನಡುವೆ ಸಂಭವಿಸಿದ ಅಪಘಾತದಿಂದ ಉದ್ಭವಿಸುವ ಎಲ್ಲ ಪರಿಹಾರ ಸಂಬಂಧವಾವ ಹಕ್ಕು ಗಳನ್ನು ಪರಿಶೀಲಿಸಿ ಇತ್ಯರ್ಥಗೊಳಿಸುವು ದಕ್ಕಾಗಿ ಅಂಬಾಲಾದ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಹಂಸರಾಜ ಖನ್ನಾರನ್ನು ಕ್ಲೈಮ್ಸ್ ಕಮಿಷನರನ್ನಾಗಿ ನೇಮಿಸಿರುವರು

ಸಮಿತಿಗಳಿಗೆ ಆಯ್ಕೆ

ಮೈಸೂರು ಪೌರಸಭೆಯ ವಿಶೇಷ ಸಭೆ ನಿನ್ನೆ ಬೆಳಿಗ್ಗೆ ಶ್ರೀ ಎಚ್ ನಂಜುಂಡ ರಾವ್‌ರವರ ಅಧ್ಯಕ್ಷತೆಯಲ್ಲಿ ಸೇರಿ ಪೌರ ಸಭೆ ಸಮಿತಿಗಳಿಗೆ ಚುನಾವಣೆ ನಡೆಸಿತು

ಸಮಿತಿಗಳ ಚುನಾವಣೆ ಬಗ್ಗೆ ಪ್ರತಿಭಟನೆ ತೋರಲು ಸಂಯುಕ್ತ ಪೌರ ಪಕ್ಷ ಸಭಾ ತ್ಯಾಗ ಮಾಡಿತು

ಸೇವಕನ ಸಾವಿಗೆ ಸಂತಾಪ ಸೂಚನೆ

ಬೊಂಬಾಯಿ ಪೌರಸಭೆ ಕಾರ್ಪೊರೇಷನ್ ಸಭೆ ಇತ್ತೀಚಿಗೆ ಸೇರಿ 24ವರ್ಷಗಳವರಿಗೆ ಸೇವಕನಾಗಿ ಮಂಡಣಹೊಂದಿದ ಕೇಶವ ವಿಷ್ಣು ಪಾಟ್ಕರ ಬಗ್ಗೆ ಸಂತಾಪ ಸೂಚಿಸಿತು ಈ ಕ್ರಮ ಅಲ್ಲಿಯ ಚರಿತ್ರೆಯಲ್ಲೇ ಪ್ರಥಮವಾದುದು

ಕಾನೂನು ವ್ಯಾಪ್ತಿಯ ಪ್ರಶ್ನಿಸುವ ಸಂಭವ

ಭಾರತ ಸರ್ಕಾರ ಶಿಕ್ಷಣ ಪುಸೂದೆಯನ್ನು ಸುಪ್ರೀಂ ಕೋರ್ಟ್ ಪರಿಶೀಲನೆಗಾಗಿ ಕಳುಹಲಿರುವ ಬಗ್ಗೆ ಕಾನೂನು ವ್ಯಾಪ್ತಿಯನ್ನು ಕೇರಳ ಸರ್ಕಾರ ಪ್ರಶ್ನಿಸುವ ಸಂಭವವಿದೆ

ಕಾಂಗ್ರೆಸ್ ಅಧಿವೇಶನಕ್ಕೆ ಆಹ್ವಾನೆ

ಅಗ್ನೇಯ ಏಷ್ಯ ಗಡಿಯ 7 ಮಂದಿ ಗುಡ್ಡಗಾಡಿನ ನಾಯಕರು ಕಾಂಗ್ರೆಸು ಅಧಿವೇಶನಕ್ಕೆ ಬರಲಿರುವರು. ಅಸ್ಸಾಮಿನ ಅನೇಕ ಗುಡ್ಡನಾಡು ಜನರೂ ಬರಲಿರುವರು ಒಕ್ಕೂಟ ಕಾಂಗ್ರೆಸು 5 ಜನರ ಭಾತೃತ್ವ ನಿಯೋಗ ಕಳಹಿಸಲಿರುವದು. ಭೂತಾನಿನಿಂದ ಪ್ರತಿನಿಧಿಗಳು ಬರಲಿರುವರು ಎಂದು ಸ್ವಾಗತ ಸಮಿತಿಗೆ ವರ್ತಮಾನ ತಲುಪಿದೆ ಎಂದು ಗೋಹತಿ ವರದಿ.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞಶಿಖಾಮಣಿ ಸಂಪತ್ಕೃಷ್ಣ ಜೋಯಿಸರಿಂದ

14 ನವಮಿ ದಶಮಿ ಸ್ವಾತಿ

ಕ್ಯಾಲೆಂಡರ್ ಸ್ವೀಕಾರ

ಕನರಾ ಬ್ಯಾಂಕಿನವರು ಕಳುಹಿಸಿ ಕೊಟ್ಟಿರುವ ಬ್ಯಾಂಕಿನ ರಜಾ ದಿನಗಳ ನ್ನೊಳಗೊಂಡಿರುವ ಸುಂದರವಾದ ಕ್ಯಾಲೆಂಡರನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇವೆ

---

7 ಸಾವಿರಕ್ಕೆ ವೇಲ್ಪಟ್ಟು 70 ವರ್ಷ ವಿರಾದ ವೃದ್ಧರು ವಿಶ್ರಾಂತಿ ವೇತನಕ್ಕೆ ಉತ್ತರ ಪ್ರದೇಶ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ತಮಿಳು ರಾಜ್ಯ ಭಾಷೆ

ಮದಂತಿಸು ರಾಜ್ಯದ ಅಧಿಕೃತ ಭಾಷೆಯು ಕಾನೂನಿನಂತೆ ತಮಿಳನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿ ಘೋಷಿಸಲಾಗಿದೆ.

ರಕ್ಷಣಾ ವೆಚ್ಚ

ವಾಷಿಂಗ್ಟನ್‌ನಿಂದ ಬಂದಿರುವ ವಾರ್ತೆಯಂತೆ, ಕಾಂಗ್ರೆಸು ಮುಂದೆ ಬರಲಿರುವ ಅಂದಾಜು ಪಟ್ಟಿಯಲ್ಲಿ ಅಧ್ಯಕ್ಷ ಐಸೆನ್‌ಹೋವರರು ರಕ್ಷಣಾ ವೆಚ್ಚಕ್ಕಾಗಿ 39500 ಮಿಲಿಯ ಡಾಲರುಗಳನ್ನು ಕೇಳಲಿರುವರು

ತಮ್ಮಲ್ಲೇ ಪರಿಹರಿಸಿಕೊಳ್ಳಲಿ

ಕಾಶ್ಮೀರ ಪ್ರಶ್ನೆಯನ್ನು ಭಾರತ-ಪಾಕಿಸ್ತಾನಗಳೇ ಪರಿಹರಿಸಿಕೊಳ್ಳಬೇಕೆಂದು ಬ್ರಿಟಿಷ್ ಪ್ರಧಾನಿ ಮೆಕ್ಮಿಲನ್ ನವ ದೆಹಲಿಯಲ್ಲಿ ತಿಳಿಸಿರುವರು.

ನ್ಯಾಟೋಗೆ ಸಂಬಂಧವಿಲ್ಲ

ಭಾರತದಲ್ಲಿರುವ ಪೋರ್ಚುಗೀಸು ಸ್ವಾಸ್ಥ್ಯಗಳ ವಿಷಯವು ಭಾರತ ಮತ್ತು ಪೋರ್ಚುಗೀಸು ಸರ್ಕಾರಗಳಿಗೆ ಸೇರಿದ್ದೆಂದೂ, ಗೋವಾ ವಿಷಯದಲ್ಲಿ ನ್ಯಾಟೋ ಸಂಸ್ಥೆಗೆ ಸಂಬಂಧವಿಲ್ಲವೆಂದೂ ಬ್ರಿಟಿಷ್ ಪ್ರಧಾನಿ ಮೆಕ್ಮಿಲನರು ಹೇಳಿದರು ಎಂದು ನವ ದೆಹಲಿ ವಾರ್ತೆ.

ಹಿಂದೂಗಳ ಬಂಧನಕ್ಕೆ ನೂರ ಆಜ್ಞೆ

ಪೂರ್ವ ಪಾಕಿಸ್ತಾನದಲ್ಲಿ ಬಹು ಮಂದಿ ಹಿಂದೂಗಳನ್ನು ಹಿಡಿದು ಕಾರ್ಯ ನಿರ್ವಹಣ ಕ್ಯಾಂಪುಗಳಲ್ಲಿ ಹಾಕುವಂತೆ ಅಲ್ಲಿಯ ಸರ್ಕಾರಕ್ಕೆ ತಾವು ತಿಳಿಸಿರುವುದಾಗಿ ಪಾಕಿಸ್ತಾನ ಪ್ರಧಾನಿ ನೂರ್ ಕರಾಚಿಯಲ್ಲಿ ತಿಳಿಸಿರುವರು.

ಆಹ್ವಾನಿಸಿದರೆ ರಾಣಿ ಆಗಮನ

ಬ್ರಿಟಿಷ್ ರಾಣಿಗೆ ಭಾರತಕ್ಕೆ ಭೇಟಿಕೊಡಬೇಕೆಂದು ಆಹ್ವಾನಿಸಿದರೆ ಅವರು ಅಂಗೀಕರಿಸುವರೆಂದು ಬ್ರಿಟಿಷ್ ಪ್ರಧಾನಿ ಮೆಕ್ಮಿಲನ್ ನವ ದೆಹಲಿಯಲ್ಲಿ ತಿಳಿಸಿದ್ದಾರೆ

ಭಾರತಕ್ಕೆ ಸಾಲ

ಭಾರತಕ್ಕೆ 100-200 ಮಿಲಿಯ ಪೌಂಡುಗಳ ಸಾಲವನ್ನು ನೀಡುವಿರಾ ಎಂದು ಬ್ರಿಟಿಷ್ ಪ್ರಧಾನಿ ಮೆಕ್ಮಿಲನ್‌ರನ್ನು ಕೇಳಲು, 'ನೀವು ಒಬ್ಬನಿಗೆ 300 ಮಿಲಿಯ ಬಾಕಿದಾರರಾಗಿರುವಾಗ ಅವನಿಗೆ ನೀವೇನು ಸಾಲ ಕೊಡುವುದಿಲ್ಲ' ಎಂದು ಹೇಳಿದರು.

ಶಾಸನೋಲ್ಲಂಘನ ಚಳುವಳಿ

ರಾಜ್ಯ ಸರ್ಕಾರ ಕನ್ನಡ ಕೇಳಿಕೆಯನ್ನು ಅಂಗೀಕರಿಸದಿದ್ದರೆ ತಾ|| 26 ರಿಂದ ಶಾಸನೋಲ್ಲಂಘನ ಚಳವಳಿ ಹೂಡಲು ಬೆಂಗಳೂರಿನಲ್ಲಿ ನಡೆದ ಸಮಾಜವಾದಿ ಪಕ್ಷದ ಸಭೆ ನಿರ್ಧರಿಸಿದೆ.

ಸೂಚನೆ — ಉತ್ತರಾಯಣ ಪುಣ್ಯಕಾಲದ ಪ್ರಯುಕ್ತ ನಾಳೆ ಸತ್ಯವಾದಿ ಪ್ರಕಟವಾಗುವುದಿಲ್ಲ.

ವುಡ್‌ಲ್ಯಾಂಡ್
ಶಿ ನ್ಮ

10-1-58 ರಿಂದ

ದೇವಾನಂದ್ — ಕಲ್ಪನಾ ಕಾರ್ತಿಕ್
ಶಶಿಕಲಾ ಪಾತ್ರವಹಿಸಿರುವ

ನೌ ದೊ ಗ್ಯಾರ
ಶಿ

Nau Do Gyara

ಅತ್ಯಮೋಘ ಹಿಂದಿ ಚಿತ್ರ

ದಿನವಹಿ 3 ಪ್ರದರ್ಶನಗಳು

ಸತ್ಯವಾದಿ
—ದಿನಪತ್ರಿಕೆ ತಿಂಗಳಿಗೆ 6 ಆಣೆ
ಸತ್ಯವಾದಿ ವಾರಾಂತ್ಯ ಪತ್ರಿಕೆ
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 1-80

ಉಮಾ ಟಾಕೀಸ್
10-1-58 ರಿಂದ
ಗುಣಸುಂದರಿ
(ತಮಿಳು)
ನಟವರ್ಗ— ಸಾವಿತ್ರಿ, ಜಮಿನಿ ಗಣೇಶ್
ನಂಬಿಯಾರ್, ಕಂಗರಾವ್, ಕರುಣಾನಿಧಿ
[ಪ್ರತಿದಿನ 3 ಆಟಗಳು]
ಪ್ರತಿ ಶುಕ್ರವಾರ, ಶನಿವಾರ, ಭಾನುವಾರ
ಬೆಳಿಗಿನ ಪ್ರದರ್ಶನ 10-30 ಕ್ಕೆ

ಅಪೆರಾ— ವೈಭವ 4 ನೇ ವಾರ
ಮಾಯಾಬಜಾರ್
ಎನ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಪೇಲಂಗಿ
ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ
ಪ್ರತಿ ದಿನ 3 ಆಟಗಳು

Protect the cow ಗೋ ಸಂರಕ್ಷಣೆ ಮಾಡಿ.
ಗೋರಕ್ಷಣ ಪತ್ರಿಕೆಗೆ ಜೊಂಬಿಗರಾಗಿರಿ

ವಿಸ್ಕೋರಿ ಸೆಂಟ್ ಲೂಯಿಸ್ ಸೋಲಾರ್ಡ್ ಬ್ಲೈಂಡ್ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕಾಲ್ಚೆಂಡಾಟ ಶಿಕ್ಷಣ ಶಾಲೆಯಲ್ಲಿ ನೀಗ್ರೋಗಳಿವರು

Edited, Printed& Published by Dharma Prachara Nivrta M S Krishna Rao at the Satyavadi Press Chamarajpuram Mysore